ಮೃತ್ಯುಂಜಯ ಎ., ಪಾಂಡವಪುರ
ಹೆಣ್ಣು ಸಂಸಾರದ ಕಣ್ಣು. ಗಂಡು?



ಅವಳ ನೆರಳಲ್ಲವೇ–ಐ ಶ್ಯಾಡೋ.

ಕೆ.ವಿ. ಗೋವಿಂದಾಚಾರಿ, ಮೈಸೂರು
ವಿದೇಶಾಂತ ಮಂತ್ರಿಗಳು ವಿದೇಶಕ್ಕೆ, ಆರೋಗ್ಯ ಮಂತ್ರಿಗಳು ಆಸ್ಪತ್ರೆಗೆ ಭೇಟಿ ನೀಡುವರು. ಅರಣ್ಯ ಮಂತ್ರಿಗಳು?
ತೇಗ, ಬೀಟೆ, ಗಂಧ, ದಂತಗಳನ್ನು ತಮ್ಮಲ್ಲೇ ಕಾಪಾಡಿಕೊಳ್ಳುವರಂತೆ.

ಎಂ.ಸಿ. ಧನ್ಯತಾ, ಬೆಂಗಳೂರು
ಈ ಅಂಕಣದಲ್ಲಿ ಪ್ರಸ್ತುತವಾಗಿರಲು ಅನುಸರಿಸಬೇಕಾದ ಅತ್ಯುತ್ತಮ ಮಾರ್ಗ ಯಾವುದು?
ಉತ್ತರಿಸಲು ಕಷ್ಟವೆನಿಸುವ ಸವಾಲುಗಳನ್ನು ಒಡ್ಡುವುದು.

ಮಹಾವೀರ ಕಾಸರ, ಶಿವಮೊಗ್ಗ
ದಾಂಪತ್ಯದಲ್ಲಿನ ಬಿರುಕನ್ನು ಯಾವುದರಿಂದ ಸರಿಪಡಿಸಬೇಕು?



ಪ್ರೀತಿ, ತಾಳ್ಮೆಗಳೆಂಬ ಫೆವಿಕಾಲ್‌ಗಳಿಂದ.

ಗಣೇಶ ಎಂ. ಪೈ, ಬೆಂಗಳೂರು
ಇಲ್ಲೋರ್ವ ಸ್ವಾಮಿಗಳು ತ್ಯಾಗವೇ ಶ್ರೇಷ್ಠ ಎಂದು ಪದೇ ಪದೇ ಹೇಳುವರಲ್ಲ?
ಸರಿಯೇ. ಅನ್ಯರು ಅವರಿಗಾಗಿ ಮಾಡುವ ತ್ಯಾಗವೇ ಶ್ರೇಷ್ಠ.

ಬಿ. ಬಸವರಾಜ್, ಹರಿಹರ
ಮದುವೆಗೆ ಮುಂಚೆ ಸೈಲೆಂಟಾಗಿರುವ ಹುಡುಗಿಯರು ನಂತರ ಬಹಳ ಜೋರಾಗುವುದೇಕೆ?
ಕೊರಳಲ್ಲಿರುವ ತಾಳಿ ಆಂಪ್ಲಿಫೈಯರ್‌ನಂತೆ ಕೆಲಸ ಮಾಡುವುದಂತೆ.

ಕಾವ್ಯಶ್ರೀ, ಶೋರಾಪುರ
ಹಣಕ್ಕೂ, ಗುಣಕ್ಕೂ ಎಂತಹ ಸಾಮ್ಯವಿರಬೇಕು?
ಎರಡೂ Note worthy ಆಗಿರಬೇಕು.

ಅನಸೂಯ ಟಿ., ಕೇದಿಗೆಮನೆ
ಜನಸಂಖ್ಯೆಯ ವಿಷಯದಲ್ಲಿ ಭಾರತ ನಂ. 1. ಇದು ಖುಷಿಯ ವಿಚಾರವೋ, ದುಃಖದ್ದೋ?
ಹೆರಿಗೆ, ತೆರಿಗೆಯವರಿಗೆ ಖುಷಿಯದ್ದು; ದೇಶದ ದೃಷ್ಟಿಯಿಂದ ದುಃಖದ್ದು.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಯಮನು ಸೀನಿಯಾರಿಟಿ ಪ್ರಕಾರ ಮೇಲೆ ಕರೆದೊಯ್ಯುವಂತಿದ್ದರೆ?
ಆಸ್ಪತ್ರೆಯ ವೆಂಟಿಲೇಟರ್ ಖರ್ಚು ಉಳಿಯುತ್ತಿತ್ತು.

ಬೀ. ನಾಗರಾಜು, ಬೆಂಗಳೂರು
ಮದುವೆಗೆ ಕರೆಯಲು ಮನೆಗೆ ಬರುವೆನೆಂದರೆ 'ಬೇಡ. ಪತ್ರಿಕೆ ವಾಟ್ಸಾಪ್ ಮಾಡು' ಎನ್ನುವರಲ್ಲ?
ಕರೆಯುವಾಗಲೇ ಗಿಫ್ಟ್ ಕೊಟ್ಟರೆ ಬರಲೇಬೇಕಲ್ಲ. ಸಂದೇಶಕ್ಕೆ ಆ ಋಣವಿಲ್ಲ.

ಬಿ.ಆರ್. ಉಷಾ, ಬೆಂಗಳೂರು
'ನಕ್ಕುಬಿಡಿ'ಯಂತೆ 'ಅತ್ತುಬಿಡಿ' ವಿಭಾಗ ಏಕಿಲ್ಲ?
ಛೆ! ದುಃಖ ಹಂಚಲು ಇದು war ಪತ್ರಿಕೆಯಲ್ಲ; ವಾರಪತ್ರಿಕೆ.

ಜಯವಂತ ಪಿ.
ಸವಿ ಮಾತಿಗೂ, ಕಿವಿಮಾತಿಗೂ ವ್ಯತ್ಯಾಸವೇನು?
ಸವಿಮಾತನ್ನು ಕಿವಿಯಲ್ಲಿ ಹೇಳುತ್ತಾರೆ. ಕಿವಿಮಾತನ್ನು ಜೋರಾಗಿ ಹೇಳುತ್ತಾರೆ.

ಶೃತಿ ರಿಗ್ರೆಟ್ ಅಯ್ಯರ್, ಅಮೆರಿಕ
ಆಡುವವರನ್ನು ಆಡದಂತೆ ಇರಿಸಲು ಏನು ಮಾಡಬೇಕು?
ಕೈಗೆ ಸ್ಮಾರ್ಟ್‌ಫೋನ್ ಕೊಟ್ಟುಬಿಡಿ.

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
ಈ ತಂತ್ರಜ್ಞಾನ ಯುಗದಲ್ಲಿ ಬದುಕಿನ ಮೌಲ್ಯಗಳಿಗೆ ಬೆಲೆ ಕಟ್ಟುವ ಜಾಣರು ಇದ್ದಾರೆಯೆ?
ಬೆಲೆಯನ್ನು ಅಂದಾಜಿಸಿ, ಕೈಗೆಟುಕದೆಂದು ಬಿಟ್ಟವರೂ ಇದ್ದಾರೆ.

## ಬಹುಮಾನಿತ ಪ್ರಶ್ನೆ

ಪಿ. ಜಯವಂತ ಪೈ, ಕುಂದಾಪುರ
ರಾಜಕಾರಣಿಗಳು ಮೇಲಿಂದ ಮೇಲೆ ದೇವಸ್ಥಾನಗಳಿಗೆ ಓಡುವುದೇಕೆ?
ಭರ್ಜರಿ ಕಾಣಿಕೆ ಪಡೆದ ದೇವನು ಅಕ್ರಮವನ್ನು ಸಕ್ರಮ ಮಾಡಿಯಾನೆಂದು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ನಾಳೆಯ ಸಾವು ಇಂದೇ ಗೊತ್ತಾದರೆ ಏನು ಮಾಡಬೇಕು?
ಅಂತ್ಯಕ್ರಿಯೆಗೆ ಆನ್‌ಲೈನ್ ಸ್ಲಾಟ್ ಬುಕ್ ಮಾಡಬೇಕು.

ಎಸ್. ಶಂಕರಪ್ಪ, ಶಿವಮೊಗ್ಗ
ಇಂದು ಅನ್ಯಾಯವೇ ನಿಜವಾಗುತ್ತಿದೆಯಲ್ಲ, ಇದಕ್ಕೆ ಯಾರು ಕಾರಣ?
ನ್ಯಾಯಕ್ಕೊಂದು ಬೆಲೆ ಕಟ್ಟಿ, ಅದನ್ನು ಬಿಕರಿ ವಸ್ತುವಾಗಿಸಿದ ನ್ಯಾಯವರ್ತಕರು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಸರ್ವಾಂಗ ಸುಂದರಿ ಎಂದರೆ ಹೇಗಿರುತ್ತಾರೆ?



ಕಮಲ, ತೊಂಡೆ, ದಾಳಿಂಬೆ ಇತ್ಯಾದಿಗಳ ಫ್ರೂಟ್ – ಫ್ಲವರ್ – ವೆಜಿಟೆಬಲ್ ಸಲಾಡ್‌ನಂತೆ.

ಮಲ್ಲಿಕಾರ್ಜುನ, ಸುರಧೇನುಪುರ
ಪುಸ್ತಕ ಓದದವರು ಪುಸ್ತಕ ಓದಿ ಅಂತಾರೆ. ಏನಿದರ ಮರ್ಮ?
ಡಿಹೈಡ್ರೇಷನ್ ಆದವನಿಗೇ ನೀರಿನ ಕೊರತೆಯ ಪರಿಣಾಮದ ಪೂರ್ಣ ಅರಿವಿರುವುದು.

ರಾಜೇಂದ್ರ ಹೆಗಡೆ, ಹಾವೇರಿ
ಪ್ರತಿವಾರ ಪ್ರಶ್ನಿಸುವವರಿಗೆ ಅವರ ಜೀವನದಲ್ಲೇ ಉತ್ತರ ಇರುವುದಿಲ್ಲವೆ? ನೀವು ಅವರಿಗೆ ಗಾಡ್‌ಫಾದರ್ ಆಗಿರುವಿರಾ?
ಇರುತ್ತದೆ. ಹೆಚ್ಚೆಂದರೆ ಅದನ್ನು ತೋರ್ಪಡಿಸುವ ಟಾರ್ಚ್ ಆಗಬಲ್ಲೆ.

■ ರಾಮ್